ಆ) ಕಡು ಬಡವರಿಗೆ ಹಸಿರು ಕಾರ್ಡು ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ?

ಆ) ಹಸಿರು ಪಡಿತರ ಚೀಟಿ ಹೊಂದಿರುವವರ ಹೋಬಳಿವಾರು ವಿವರ ಈ ಕೆಳಗಿನಂತೆ ಇದೆ.

1. ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ	5754
2. ದೊಡ್ಡಬಳ್ಳಾಪುರ ತಾಲ್ಲೂಕು ಮಧುರೆ ಹೋಬಳಿ	2635
3. ಮಾಗಡಿ ತಾಲ್ಲೂಕು ಸೋಲೂರು ಹೋಬಳಿ	1043
4. ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ.	4917
ಒಟ್ಟು	14349

ಆ) ಹಸಿರು ಕಾರ್ಡು ಪಡೆಯಲು ಈಗಿರುವ ವಾರ್ಷಿಕ ಆದಾಯ ರೂ. 3,500-00ರಿಂದ ರೂ. 6,400-00ಕ್ಕೆ ಹೆಚ್ಚಿಸಿ ಫಲಾನುಭವಿಗಳನ್ನು ಗುರ್ತಿಸುವ ಕಾರ್ಯಕ್ರಮ ಈಗಾಗಲೇ ರಾಜ್ಯದಲ್ಲಿ ನಡೆಯುತ್ತಿದೆ.

ಕಳ್ಳಂಬೆಳ್ಳದಲ್ಲಿ ಕೆ.ಇ.ಬಿ. ಉಪಕೇಂದ್ರ ಸ್ಥಾಪನೆ ಬಗ್ಗೆ.

193 ಶ್ರೀ. ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಮತ್ತು ಹುಳಿಯೂರಿನಲ್ಲಿ ಎಂ. ಯು ಎನ್.ಎಸ್. ಸ್ಟೇಷನ್ ಸ್ಥಾಪಿಸಲು ಉದ್ದೇಶಿಸಿದ್ದು ಅದು ಕಾರ್ಯಗತವಾಗುವಲ್ಲಿ ವಿಳಂಬವಾಗಲು ಕಾರಣಗಳೇನು?

ಆ) ಈ ಪ್ರದೇಶದಲ್ಲಿ ವೋಲ್ಟೇಜ್ ಇಲ್ಲದೆ ಪಂಪುಸೆಟ್ಟುಗಳು ಕಾರ್ಖಾನೆಗಳು ಮುಚ್ಚಿಹೋಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿಯೇ?

ಇ) ಹಾಗಿದ್ದಲ್ಲಿ, ಸಬ್ ಸ್ಟೇಷನ್ ಸ್ಥಾಪಿಸಿ ಈ ಸಮಸ್ಯೆ ಪರಿಹರಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಕಳ್ಳಂಬೆಳ್ಳ ಉಪ ವಿದ್ಯುತ್ ಕೇಂದ್ರದ (ಎಂ.ಯು.ಎನ್.ಎಸ್) ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು ಸದರೀ ಉಪವಿದ್ಯುತ್ ಕೇಂದ್ರವನ್ನು ಮಾರ್ಚ್ 92ರ ಅಂತ್ಯದ ವೇಳೆಗೆ ಚಾಲನೆಗೊಳಿಸಲು ಉದ್ದೇಶಿಸಿದೆ.

ಹುಳಿಯೂರಿನಲ್ಲಿ ಉದ್ದೇಶಿಸಿರುವ ಉಪ ವಿದ್ಯುತ್‌ಕೇಂದ್ರದ ಸಮೀಕ್ಷಣೆ (ಸರ್ವೆ) ಕಾರ್ಯವು ಪೂರ್ಣಗೊಂಡಿದ್ದು, ನಿರ್ಮಾಣ ಕಾರ್ಯವನ್ನು 1992-93ರ ಸಾಲಿನಲ್ಲಿ ಪ್ರಾರಂಭಿಸಿ, 1993-94ರ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ಸದರೀ ಪ್ರದೇಶಗಳಲ್ಲಿರುವ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಗಮನಕ್ಕೆ ಬಂದಿದ್ದು, ವೋಲ್ಟೇಜ್ ಇಲ್ಲದೆ ಪಂಪ್ ಸೆಟ್ ಮತ್ತು ಕಾರ್ಖಾನೆಗಳು ಮುಚ್ಚಿ ಹೋಗಿರುವ ಸಂಗತಿ ಗಮನಕ್ಕೆ ಬಂದಿಲ್ಲ.

ಇ) ಕಳ್ಳಂಬೆಳ್ಳ ಉಪವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿ, ಮಾರ್ಚ್ 92 ರ ಅಂತ್ಯದ ವೇಳೆಗೆ ಸದರೀ ಉಪವಿದ್ಯುತ್ ಕೇಂದ್ರವನ್ನು ಚಾಲನೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಹುಳಿಯೂರಿನಲ್ಲಿ ಉದ್ದೇಶಿಸಿರುವ ಉಪವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು 1992-93ರ ಸಾಲಿನಲ್ಲಿ ಪ್ರಾರಂಭಿಸಿ, 1993, 94ರ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿರುವುದು

194 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿ ಕೃಷಿಕರಿಗೆ, ಕಾರ್ಖಾನೆಗಳಿಗೆ ಮತ್ತು ಗ್ರಾಮಗಳಲ್ಲಿನ ಬೆಳಕಿಗೆ ತೀವ್ರ ತೊಂದರೆಯಾಗಿ ರಾಜ್ಯದ ಪ್ರಗತಿಗೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ತೊಂದರೆಯನ್ನು ಶಾಶ್ವತವಾಗಿ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಇ) *ಇದಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಬಂದಿದೆ. ಇದಕ್ಕೆ ಕಾರಣ ಲಭ್ಯತೆಯಿರುವ ವಿದ್ಯುಚ್ಛಕ್ತಿಗಿಂತ ಬೇಡಿಕೆ ಅಗಾಧವಾಗಿರುವುದರಿಂದ ಲೋಡ್ ಶೆಡ್ಡಿಂಗ್ ಮತ್ತು ಪವರ್ ಕಟ್‌ನ್ನು ಅನಿವಾರ್ಯವಾಗಿ ಜಾರಿಗೊಳಿಸಲಾಗಿದೆ.

ಆ) ಈ ತೊಂದರೆಯನ್ನು ನಿವಾರಿಸಲು ಮಂಡಳಿಯು ಪ್ರತಿ ವರ್ಷವೂ ಹೊಸ ವಿದ್ಯುತ್ ಪ್ರವರ್ಧಣಾ ಮಾರ್ಗಗಳನ್ನು ನಿರ್ಮಾಣ ಮಾಡುತ್ತಿದೆ ಮತ್ತು ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸುತ್ತಿದೆ. ಈ ಕಾರ್ಯಗಳಿಂದಾಗಿ, ವಿಶ್ವಬ್ಯಾಂಕಿನಿಂದ, ಏಷ್ಯಾನ್ ಅಭಿವೃದ್ಧಿ ಬ್ಯಾಂಕ್ ಮತ್ತು ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಆರ್ಥಿಕ ನೆರವು ಪಡೆಯುತ್ತಿದೆ.

ಇ) 'ಅ'ನಲ್ಲಿ ತಿಳಿಸಿರುವ ಕಾಮಗಾರಿಗಳಿಗೆ ಬೇಕಾಗುವ ಹಣದ ಮೊತ್ತ ಅಗಾಧವಾಗಿರುವುದರಿಂದ ಅವಶ್ಯಕತೆ ಮತ್ತು ಆದ್ಯತೆಗಳನ್ನು ಗಮನಿಸಿ ಹಂತ ಹಂತವಾಗಿ ನಿರ್ಮಾಣ ಕಾರ್ಯವನ್ನು ಮಾಡಲಾಗುವುದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆದಾಯ

204 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಿಜಾಪುರ ವಿಭಾಗವನ್ನು ಕಡೆಗಾಣಿಸಿದ್ದರು ಅದು ಮಿಕ್ಕ ಎಲ್ಲಾ ವಿಭಾಗಗಳಿಗಿಂತ ಹೆಚ್ಚಿನ ಆದಾಯ ಗಳಿಸುವುದು ನಿಜವೇ?*

ಆ) *ಈ ವಿಭಾಗಕ್ಕೆ ಹೆಚ್ಚಿನ ವಾಹನ ಚಾಲಕ ಮತ್ತು ನಿರ್ವಾಹಕರನ್ನು ನೀಡದಿರುವುದಕ್ಕೆ ಕಾರಣಗಳೇನು?*

ಇ) *ವಿಜಾಪುರ ವಿಭಾಗವು ರಾಜ್ಯದಲ್ಲಿ ಅತಿ ವಿಶಾಲವಾದ ಜಿಲ್ಲೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ವಾಹನಗಳ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸಲು ಸರ್ಕಾರದವರು ಹೆಚ್ಚಿನ ವಾಹನ ಚಾಲಕ, ಚಾಲಕ ಮತ್ತು ನಿರ್ವಾಹಕರನ್ನು ಒದಗಿಸಲು ಕೈಗೊಂಡಿರುವ ಕ್ರಮಗಳೇನು?*